# ಹತ್ತನೆ ತರಗತಿ ಸಮಾಜ ವಿಜ್ಞಾನ ಮಾದರಿ ಪ್ರಶ್ನೆ ಪತ್ರಿಕೆ – 01

**ಗರಿಷ್ಠ ಅಂಕಗಳು :– 40**

**ವಿಭಾಗವಾರು ಅಂಕಗಳ ಹಂಚಿಕೆ (ಅಂದಾಜು)**

| ಅ. ನಂ. | ವಿಭಾಗಗಳು | **80** ಅಂಕಗಳಿಗೆ ನಿಗದಿಪಡಿಸಿದ ಅಂಕಗಳು | **40** ಅಂಕಗಳಿಗೆ ನಿಗದಿಪಡಿಸಿದ ಅಂಕಗಳು (ಅಂದಾಜು) |
|---|---|---|---|
| 01 | ಇತಿಹಾಸ | 25 | 12 |
| 02 | ರಾಜ್ಯಶಾಸ್ತ್ರ | 11 | 05 |
| 03 | ಸಮಾಜಶಾಸ್ತ್ರ | 08 | 04 |
| 04 | ಭೂಗೋಳಶಾಸ್ತ್ರ | 22 | 11 |
| 05 | ಅರ್ಥಶಾಸ್ತ್ರ | 08 | 04 |
| 06 | ವ್ಯವಹಾರ ಅಧ್ಯಯನ | 08 | 04 |
| | ಒಟ್ಟು ಅಂಕಗಳು | 80 | 40 |

**ಪ್ರಶ್ನೆ 1 ಈ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **40 * 1 = 40**

**1.** ಫ್ರಾನ್ಸಿಸ್ಕೊ ಡಿ ಆಲ್ಮೇಡಾ ಭಾರತದಲ್ಲಿ 'ನೀಲಿ ನೀರಿನ ನೀತಿ' ಯನ್ನು ಜಾರಿಗೆ ತರಲು ಕಾರಣ.......

ಎ) ಬಂದರುಗಳನ್ನು ಅಭಿವೃದ್ಧಿ ಪಡಿಸಲು. ಬಿ) ವಿದೇಶಿ ವ್ಯಾಪಾರವನ್ನು ಬಲಪಡಿಸಲು.

ಸಿ) ನೌಕಾ ಶಕ್ತಿಯನ್ನು ಬಲಪಡಿಸಲು. ಡಿ) ಗೋವಾವನ್ನು ವಶಪಡಿಸಿಕೊಳ್ಳಲು.

**2.** ಪೇಶ್ವೆ ಎರಡನೇ ಬಾಜಿರಾವ್ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿ ಸಹಿ ಹಾಕಿದ ಒಪ್ಪಂದ..........

ಎ) ಬೆಸ್ಸಿನ್ ಒಪ್ಪಂದ ಬಿ) ಸಾಲ್ಬಾಯ್ ಒಪ್ಪಂದ ಸಿ) ಅಲಹಾಬಾದ ಒಪ್ಪಂದ ಡಿ) ಪೂನಾ ಒಪ್ಪಂದ

**3.** **1800** ರಲ್ಲಿ ಕಲ್ಕತ್ತಾದಲ್ಲಿ ಫೋರ್ಟ ವಿಲಿಯಂ ಕಾಲೇಜನ್ನು ಸ್ಥಾಪಿಸಲು ಕಾರಣ...........

ಎ) ಇಂಗ್ಲೀಷ ಶಿಕ್ಷಣ ನೀಡಲು. ಬಿ) ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣ ನೀಡಲು.

ಸಿ) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು. ಡಿ) ನ್ಯಾಯಾಂಗ ವ್ಯವಸ್ಥೆಯನ್ನು ಸುಧಾರಿಸಲು.

**4** ಸುರಪುರ ಈಗಿನ ಯಾವ ಜಿಲ್ಲೆಯಲ್ಲಿದೆ?.....

ಎ) ಕಲಬುರಗಿ ಬಿ) ಬೀದರ ಸಿ) ಬಾಗಲಕೋಟಿ ಡಿ) ಯಾದಗಿರಿ

**5.** ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಗುರುತಿಸಿ..........

ಎ) ರಾಜಾ ರಾಮಮೋಹನ ರಾಯರು – ಸಂವಾದ ಕೌಮುದಿ

ಬಿ) ದಯಾನಂದ ಸರಸ್ವತಿ – ಸತ್ಯಾರ್ಥ ಪ್ರಕಾಶ

ಸಿ) ಮಹಾತ್ಮಾ ಜ್ಯೋತಿಬಾ ಫುಲೆ – ಗುಲಾಮಗಿರಿ

ಡಿ) ಸ್ವಾಮಿ ವಿವೇಕಾನಂದ – ಭಗವದ್ಗೀತೆ

6. ಡಿರೆಜಿಯೋ ತನ್ನ ಶಿಕ್ಷಕ ವೃತ್ತಿಗೆ ರಾಜೀನಾಮೆ ನೀಡಲು ಕಾರಣ...........

ಎ) ಅವರ ಸಹೋದ್ಯೋಗಿಗಳ ಮತ್ತು ಬೆಂಬಲಿಗರ ಒತ್ತಡ ಬಿ) ಅವರ ಅನಾರೋಗ್ಯ

ಸಿ) ವೇದಗಳ ಅಭ್ಯಾಸದ ಮೇಲೆ ಅವರಿಗಿದ್ದ ಆಸಕ್ತಿ ಡಿ) ಇಂಗ್ಲೆಂಡಿಗೆ ಹಿಂದಿರುಗುವಂತೆ ಸರ್ಕಾರದಿಂದ ಒತ್ತಡ.

7. 1857 ರ ದಂಗೆಯ ಸಮಯದಲ್ಲಿ ಬ್ರಿಟಿಷರು ಸೈನಿಕರಿಗೆ ನೀಡಿದ ನವೀನ ಬಂದುಕುಗಳ ಹೆಸರು..........

ಎ) ಎನ್‌ಫೀಲ್ಡ್ ಬಂದೂಕುಗಳು ಬಿ) ರಾಯಲ್ ಎನ್‌ಫೀಲ್ಡ್ ಬಂದೂಕುಗಳು

ಸಿ) ಎಲ್ ಎಮ್ ಜಿ ಇನ್ಸಾಸ್ ಡಿ) ಎಕೆ 47

8. ವರ್ಣಾಕ್ಯೂಲರ್ ಪ್ರೆಸ್ ಕಾಯ್ದೆಯ ಮುಖ್ಯ ಉದ್ದೇಶ.............

ಎ) ಪತ್ರಿಕೆಗಳಿಗೆ ಸ್ವಾತಂತ್ರ್ಯ ನೀಡುವುದು ಬಿ) ರಾಷ್ಟ್ರೀಯ ಐಕ್ಯತೆಯನ್ನು ಬೆಳೆಸುವುದು.

ಸಿ) ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದು ಸಿ) ಸಾರ್ವಜನಿಕ ಹಿತಾಸಕ್ತಿಗಳನ್ನು ಬೆಂಬಲಿಸಲು.

9. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧೀವೇಶನದ ಅಧ್ಯಕ್ಷರಾಗಿದ್ದವರು.............

ಎ) ವಲ್ಲಭ ಬಾಯಿ ಪಟೇಲ್ ಬಿ) ಡಾ. ಬಿ ಆರ್ ಅಂಬೇಡ್ಕರ್ ಸಿ) ಲಾಲ ಲಜಪತ ರಾಯ್ ಡಿ) ಸುಭಾಸ್ ಚಂದ್ರ ಬೋಸ್

10. ಡಾ. ಬಿ ಆರ್ ಅಂಬೇಡ್ಕರವರಿಗೆ ಸಂಬಂಧವಿಲ್ಲದ ಅಂಶ.............

ಎ) ಕಾನೂನು ಭಂಗ ಚಳುವಳಿಯನ್ನು ಆರಂಭಿಸಿದರು. ಬಿ) ಮಹದ್ & ಕಾಲರಾಂ ಚಳುವಳಿಗಳನ್ನು ರೂಪಿಸಿದರು.

ಸಿ) ಸಾಮಾಜಿಕ ಸ್ವಾತಂತ್ರ್ಯಕ್ಕೆ ಒತ್ತು ನೀಡಿದರು. ಡಿ) ಮೊದಲ ಕಾನೂನು ಮಂತ್ರಿಯಾಗಿದ್ದರು.

11. ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದದ್ದು.......

ಎ) 1953 ರಲ್ಲಿ ಬಿ) 1956 ರಲ್ಲಿ ಸಿ) 1952 ರಲ್ಲಿ ಡಿ) 1947 ರಲ್ಲಿ

12. ಬಾಂಗ್ಲಾದಿಂದ ಬಂದ ಬಹುತೇಕ ನಿರಾಶ್ರಿತರು ಬಂಗಾಳದಲ್ಲಿ ಮಾತ್ರ ನೆಲೆಯೂರಲು ಕಾರಣ.................

ಎ) ವಿಶಾಲವಾದ ಭೂಪ್ರದೇಶವಿದ್ದುದರಿಂದ ಬಿ) ಬಾಂಗ್ಲಾಕ್ಕೆ ಸಮೀಪವಿರುವುದರಿಂದ

ಸಿ) ಬಂಗಾಳಿ ಭಾಷೆ ಮಾತ್ರ ಪರಿಚಯವಿದ್ದುದರಿಂದ ಡಿ) ಮೂಲಭೂತ ಸೌಲಭ್ಯಗಳಿರುವುದರಿಂದ.

13. ಕರ್ನಾಟಕ ಸರ್ಕಾರ ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ ರೂಪಿಸಿದ ಕಾರ್ಯಕ್ರಮ..........

ಎ) ಸ್ತ್ರೀ ಶಕ್ತಿ ಬಿ) ಅಂಗನವಾಡಿಗಳ ಸ್ಥಾಪನೆ ಸಿ) ಮಹಿಳಾ ಆರೋಗ್ಯ ಡಿ) ಮಹಿಳಾ ಮಂಡಳಗಳು

14. 1954 ರಲ್ಲಿ ಪಂಚಶೀಲ ತತ್ವಗಳ ಒಪ್ಪಂದ ಮಾಡಿಕೊಂಡ ಪ್ರಧಾನಿಗಳೆಂದರೆ.........

ಎ) ಜವಾಹರಲಾಲ ನೆಹರು ಮತ್ತು ಮೇಜಿ ಬಿ) ಮೋತಿಲಾಲ ನೆಹರೂ ಮತ್ತು ಚೌ ಎನ್ ಲಾಯ್

ಸಿ) ಲಾಲ ಬಹದ್ದೂರ ಶಾಸ್ತ್ರೀ ಮತ್ತು ಅಯೂಬ್ ಖಾನ್ ಡಿ) ಜವಾಹರ ಲಾಲ್ ನೆಹರೂ ಮತ್ತು ಚೌ ಎನ್ ಲಾಯ್

15. ಭಾರತದ ಭಿಲಾಯ್ ಮತ್ತು ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಾಯ ಮಾಡಿದ ರಾಷ್ಟ್ರ.........

ಎ) ರಷ್ಯಾ ಬಿ) ಅಮೇರಿಕಾ ಸಿ) ಚೀನಾ ಡಿ) ಪಾಕಿಸ್ತಾನ

**16.** ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಮಾನವ ಹಕ್ಕುಗಳಿಗೆ ಅಂಗೀಕಾರ ನೀಡಿದ್ದು..............

ಎ) **1948** ಡಿಶೆಂಬರ **10** ಬಿ) **1945** ಅಕ್ಟೋಬರ **24** ಸಿ) **1948** ಡಿಶೆಂಬರ **8** ಡಿ) **1948** ಮಾರ್ಚ **15**

**17.** ಹೊಂದಿಸಿ ಬರೆಯಿರಿ.

| ವಿಶ್ವ ಸಂಸ್ಥೆಯ ಅಂಗ ಸಂಸ್ಥೆಗಳು | ಕೇಂದ್ರ ಕಛೇರಿ ಇರುವ ಸ್ಥಳ |
|---|---|
| **A** ಯುನೆಸ್ಕೋ | **1.** ಹೇಗ್ |
| **B** ಅಂತರಾಷ್ಟ್ರೀಯ ಕಾರ್ಮಿಕ ಸಂಘ | **2.** ವಾಷಿಂಗಟನ್ |
| **C** ಅಂತರರಾಷ್ಟ್ರೀಯ ನ್ಯಾಯಾಲಯ | **3.** ಪ್ಯಾರಿಸ್ |
| **D** ಐ. ಬಿ. ಆರ್. ಡಿ. | **4.** ಜಿನೇವಾ |

| | A | B | C | D |
|---|---|---|---|---|
| ಎ) | 3 | 4 | 1 | 2 |
| ಬಿ) | 1 | 2 | 3 | 4 |
| ಸಿ) | 3 | 4 | 2 | 1 |
| ಡಿ) | 2 | 3 | 4 | 1 |

**18.** ಈ ಕೆಳಗಿನವುಗಳಲ್ಲಿ ಯಾವುದು ಅಸ್ಪೃಶ್ಯತೆಯ ಸಮಸ್ಯೆಯಲ್ಲ.............

ಎ) ಆಸ್ತಿಯ ಒಡೆತನದ ಹಕ್ಕಿಲ್ಲ ಬಿ) ರಾಜಕೀಯ ಭಾಗವಹಿಸುವಿಕೆ ನಿರಾಕರಣೆ

ಸಿ) ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು ಡಿ) ಸಮಾನ ಅವಕಾಶಗಳು

**19.** ವಲಸೆಯು ಇದರ ಒಂದು ಪ್ರಮುಖ ಲಕ್ಷಣವಾಗಿದೆ......................

ಎ) ಅಸಂಘಟಿತ ವಲಯದ ಕಾರ್ಮಿಕರು. ಬಿ) ಸಂಘಟಿತ ವಲಯದ ಕಾರ್ಮಿಕರು.

ಸಿ) ಬಾಲ ಕಾರ್ಮಿಕರು ಡಿ) ಮಹಿಳಾ ಕಾರ್ಮಿಕರು.

**20.** ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿಯನ್ನು ಆರಂಭಿಸಿದವರು..........

ಎ) ಮೇಧಾ ಪಾಟ್ಕರ ಬಿ) ಸುಂದರಲಾಲ್ ಬಹುಗುಣ ಸಿ) ಶಿವರಾಮ ಕಾರಂತ ಡಿ) ಕುಸುಮಾ ಸೊರಬ

**21.** ಬಾಲ್ಯ ವಿವಾಹ ನಡೆದಾಗ ದೂರು ನೀಡಲು ಬಳಸುವ ಮಕ್ಕಳ ಸಹಾಯವಾಣಿ..............

ಎ) **108** ಬಿ) **1098** ಸಿ) **111** ಡಿ) **112**

**22.** ಭಾರತದ ಎತ್ತರವಾದ ಪರ್ವತ ಶಿಖರ..................

ಎ) ಕಾಂಚನ ಜಂಗ    ಬಿ) ಗಾಡ್ವಿನ್ ಆಸ್ಟಿನ್    ಸಿ) ಮೌಂಟ್ ಎವರೆಸ್ಟ್    ಡಿ) ಧವಳಗಿರಿ

**23.** ಬೇಸಿಗೆ ಕಾಲದಲ್ಲಿ ಭಾರತದಲ್ಲಿ ಉಷ್ಣಾಂಶ ಹೆಚ್ಚಾಗಿರಲು ಕಾರಣ.........

ಎ) ಸೂರ್ಯನ ಲಂಬ ಕಿರಣಗಳು ಉತ್ತರ ಗೋಳಾರ್ಧದ ಮೇಲೆ ಬೀಳುವುದರಿಂದ.

ಬಿ) ಸೂರ್ಯನ ಲಂಬ ಕಿರಣಗಳು ದಕ್ಷಿಣ ಗೋಳಾರ್ಧದ ಮೇಲೆ ಬೀಳುವುದರಿಂದ.

ಸಿ) ನೈರುತ್ಯ ಮಾನ್ಸೂನ ಮಾರುತಗಳ ಪ್ರಭಾವದಿಂದ.

ಡಿ) ಈಶಾನ್ಯ ಮಾನ್ಸೂನ ಮಾರುತಗಳ ಪ್ರಭಾವದಿಂದ.

**24.** ಸಂಬಂಧ ಪಡದ ಅಂಶವನ್ನು ಗುರುತಿಸಿರಿ...

ಎ) ಅರಣ್ಯ ನಾಶ ನಿಯಂತ್ರಣ    ಬಿ) ಕಾಡ್ಗಿಚ್ಚು ನಿಯಂತ್ರಣ    ಸಿ) ಮರಗಳ ಕಳ್ಳಸಾಗಾಣೆ ತಡೆ    ಡಿ) ಕೈಗಾರಿಕೀಕರಣ

**25.** ಮಣ್ಣಿನ ಸವೆತಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಎ) ಅರಣ್ಯ ನಾಶ    ಬಿ) ಅತಿಯಾಗಿ ಮೇಯಿಸುವುದು.    ಸಿ) ಅವೈಜ್ಞಾನಿಕ ಬೇಸಾಯ ಪದ್ಧತಿ    ಡಿ) ಚೆಕ್ ಡ್ಯಾಮ್‌ಗಳ ನಿರ್ಮಾಣ

**26.** ಉತ್ತರ ಪ್ರದೇಶದ ಪ್ರಮುಖ ವಿವಿಧೋದ್ದೇಶ ನದಿ ಕಣಿವೆ ಯೋಜನೆ ಇದಾಗಿದೆ......

ಎ) ದಾಮೋದರ ನದಿ ಕಣಿವೆ ಯೋಜನೆ    ಬಿ) ಹಿರಾಕುಡ್ ಯೋಜನೆ

ಸಿ) ರಿಹಾಂದ್ ಯೋಜನೆ    ಡಿ) ಭಾಕ್ರಾ–ನಂಗಲ್ ನದಿ ಕಣಿವೆ ಯೋಜನೆ

**27.** ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸುವ ಬೇಸಾಯ ಪದ್ಧತಿ...

ಎ) ವಾಣಿಜ್ಯ ಬೇಸಾಯ    ಬಿ) ಸಾಂದ್ರ ಬೇಸಾಯ    ಸಿ) ನೆಡುತೋಪು ಬೇಸಾಯ    ಡಿ) ನೀರಾವರಿ ಬೇಸಾಯ

**28.** ಭಾರತದ ಅತ್ಯಂತ ಪ್ರಮುಖವಾದ ಆಹಾರ ಬೆಳೆ....

ಎ) ಭತ್ತ    ಬಿ) ಗೋಧಿ    ಸಿ) ರಾಗಿ    ಡಿ) ಜೋಳ

**29.** ಭಾರತದ ಹಳ್ಳಿಗಳು ಮತ್ತು ಕೃಷಿ ಅಭಿವೃದ್ಧಿಗೆ ಅತ್ಯವಶ್ಯಕವಾದ ಸಾರಿಗೆ ಮಾಧ್ಯಮ ಯಾವುದು?

ಎ) ರೈಲು ಸಾರಿಗೆ    ಬಿ) ಜಲ ಸಾರಿಗೆ    ಸಿ) ರಸ್ತೆ ಸಾರಿಗೆ    ಡಿ) ವಾಯು ಸಾರಿಗೆ

**30.** ಈ ಕೆಳಗಿನವುಗಳಲ್ಲಿ ಯಾವ ಕೈಗಾರಿಕೆ ಅರಣ್ಯ ಆಧಾರಿತವಾಗಿದೆ...

ಎ) ಅಲ್ಯೂಮಿನಿಯಂ ಕೈಗಾರಿಕೆ.    ಬಿ) ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ.    ಸಿ) ಹತ್ತಿ ಬಟ್ಟೆ ಕೈಗಾರಿಕೆ.    ಡಿ) ಕಾಗದ ಕೈಗಾರಿಕೆ.

**31.** ಭಾರತದ 'ಕನಿಷ್ಠ ಭೂಕಂಪ ತೀವ್ರತೆಯ ವಲಯ' ಇದಾಗಿದೆ.

ಎ) ಸಿಂಧೂ–ಗಂಗಾ ವಲಯ    ಬಿ) ಪರ್ಯಾಯ ದ್ವೀಪ ವಲಯ

ಸಿ) ಹಿಮಾಲಯ ವಲಯ.    ಡಿ) ಕರಾವಳಿ ಪ್ರದೇಶ.

**32.** **1993** ರ ಸಂವಿಧಾನದ **73** ನೇ ತಿದ್ದುಪಡಿ ಕಾಯ್ದೆಯ ಮುಖ್ಯ ಉದ್ದೇಶ....

ಎ) ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳ ರಚನೆ.    ಬಿ) ಜಾತ್ಯಾತೀತ ಪದವನ್ನು ಸೇರಿಸುವುದು.

ಸಿ) ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು.    ಡಿ) ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವುದು.

**33.** ಒಂದು ವರ್ಷದಲ್ಲಿ ಉತ್ಪಾದಿಸಿದ ಸರಕು–ಸೇವೆಗಳ ಮೌಲ್ಯವನ್ನು ಏನೆನ್ನುವರು........

ಎ) ತಲಾ ಆದಾಯ ಬಿ) ನೈಜ ರಾಷ್ಟ್ರೀಯ ಆದಾಯ ಸಿ) ರಾಷ್ಟ್ರೀಯ ಆದಾಯ ಡಿ) ಮಾನವ ಅಭಿವೃದ್ಧಿ ಸೂಚಿ.

**34.** ಆರ್ಥಿಕ ಪ್ರಗತಿಯ ಮುಖ್ಯ ಉದ್ದೇಶ.......

ಎ) ಕೈಗಾರಿಕೆಗಳ ಅಭಿವೃದ್ಧಿ ಬಿ) ಗ್ರಾಮೀಣ ಗುಡಿ ಕೈಗಾರಿಕೆಗಳ ಅಭಿವೃದ್ಧಿ

ಸಿ) ಮಹಿಳಾ ಮತ್ತು ಅಭಿವೃದ್ಧಿ ಡಿ) ಜನರ ಕಲ್ಯಾಣವನ್ನು ಹೆಚ್ಚಿಸುವುದು.

**35.** 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು......

ಎ) ಮಹಾತ್ಮಾ ಗಾಂಧೀಜಿಯವರು ಬಿ) ಡಾ. ಬಿ ಆರ್ ಅಂಬೇಡ್ಕರ

ಸಿ) ರಾಜಾ ರಾಮಮೋಹನ ರಾಯ್ ಡಿ) ಜವಾಹರ ಲಾಲ್ ನೆಹರೂ

**36**. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ...................

ಎ) ಉಳಿತಾಯ ಖಾತೆ ಬಿ) ಆವರ್ತ ಠೇವಣಿ ಖಾತೆ ಸಿ) ಚಾಲ್ತಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

**37.** ಪರಿಹಾರ ಮೊತ್ತವು **20** ಲಕ್ಷ ರೂಪಾಯಿಗಳನ್ನು ಮೀರಿದ್ದರೆ ಅಂತಹ ದೂರನ್ನು ––––––––––ಆಯೋಗಕ್ಕೆ ಸಲ್ಲಿಸಬೇಕು...

ಎ) ಜಿಲ್ಲಾ ವೇದಿಕೆ ಬಿ) ರಾಜ್ಯ ಆಯೋಗ ಸಿ) ರಾಷ್ಟ್ರೀಯ ಆಯೋಗ ಡಿ) ಗ್ರಾಹಕ ರಕ್ಷಣ ವೇದಿಕೆ

**38**. ಪ್ರತಿ ವರ್ಷ ವಿಶ್ವ ಗ್ರಾಹಕರ ದಿನವನ್ನು ಆಚರಿಸುವುದು...

ಎ) ಅಗಷ್ಟ–**15** ರಂದು ಬಿ) ಮಾರ್ಚ–**10** ರಂದು ಸಿ) ಜನೇವರಿ–**26** ರಂದು ಡಿ) ಮಾರ್ಚ–**15** ರಂದು

**39**. ಬ್ಯಾಂಕ್ ಖಾತೆಯನ್ನು ತೆಗೆಯುವಾಗ ಪರಿಚಿತರ ಉಲ್ಲೇಖ ಯಾರಿಗೆ ಅವಶ್ಯಕವಾಗಿರುತ್ತದೆ?

ಎ) ಹಣದ ರಕ್ಷಣಾ ದೃಷ್ಠಿಯಿಂದ ಬಿ) ಗ್ರಾಹಕರ ರಕ್ಷಣಾ ದೃಷ್ಠಿಯಿಂದ

ಸಿ) ಬ್ಯಾಂಕಿನ ರಕ್ಷಣಾ ದೃಷ್ಠಿಯಿಂದ ಡಿ) ಖಾತೆಯ ರಕ್ಷಣಾ ದೃಷ್ಠಿಯಿಚಿದ

**40**. ಕೊಟ್ಟಿರುವ ನಕಾಶೆಯಲ್ಲಿನ ಭೌಗೋಳಿಕ ಅಂಶಗಳ ಸರಿಯಾದ ಆಯ್ಕೆಯನ್ನು ಗುರುತಿಸಿ.

ಎ) **1.** ಕೇ2 **2.** ಕಾವೇರಿ **3.** ಅರಾವಳಿ **4.** ಮುಂಬಯಿ

ಬಿ ) **1.** ಮುಂಬಯಿ **2.**ಕೇ2 **3.** ಕಾವೇರಿ **4.** ಅರಾವಳಿ

ಸಿ ) **1.** ಮುಂಬಯಿ **2.** ಕಾವೇರಿ **3.** ಅರಾವಳಿ **4.** ಕ2

ಡಿ) **1.** ಕೇ2 **2.** ಅರಾವಳಿ **3.** ಕಾವೇರಿ **4.** ಮುಂಬಯಿ

